**ದಿನಾಂಕ: 21.09.2011ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಾಲ್ಕನೇ ಆರ್ಥಿಕ ಸಮಿತಿ ಸಭೆಯ ಸಭಾ ನಡಾವಳಿಗಳು**

**ಸಭೆಯಲ್ಲಿ ಹಾಜರಿದ್ದವರು**

| | | |
|---|---|---|
| 1. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ),<br>ಕರ್ನಾಟಕ ಸರ್ಕಾರ, ಬೆಂಗಳೂರು. | ಅಧ್ಯಕ್ಷರು |
| 2. | ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |
| 3. | ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು. | ಸದಸ್ಯರು |
| 4. | ಉಪ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ),<br>ಕರ್ನಾಟಕ ಸರ್ಕಾರ, ಬೆಂಗಳೂರು. | ಸದಸ್ಯರು |
| 5. | ನಿರ್ದೇಶಕರು,<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ | ಸದಸ್ಯರು |
| 6. | ಆರ್ಥಿಕ ಸಲಹೆಗಾರರು,<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ. | ಸದಸ್ಯ ಕಾರ್ಯದರ್ಶಿಗಳು. |

ಪ್ರಾರಂಭದಲ್ಲಿ ಆರ್ಥಿಕ ಸಲಹೆಗಾರರು ಹಾಗೂ ಸದಸ್ಯ ಕಾರ್ಯದರ್ಶಿ, ಹಣಕಾಸು ಸಮಿತಿ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹಣಕಾಸು ಸಮಿತಿ ಸಭೆಯಲ್ಲಿ ಹಾಜರಿರುವ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು. ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಣಕಾಸು ಸಮಿತಿ ಸಭೆಯ ಸಭಾಸೂಚಿ (ಅಜೆಂಡಾ)ಯನ್ನು ವಿಷಯವಾರು ಚರ್ಚೆಗೆ ತೆಗೆದುಕೊಳ್ಳಲು ಸೂಚಿಸಿದರು.

**ವಿಷಯ ಸಂಖ್ಯೆ 1 : ದಿನಾಂಕ:04.08.2010 ರಂದು ಜರುಗಿದ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿಗಳ ಬಗ್ಗೆ ಕೈಗೊಂಡ ಅನುಪಾಲನಾ ವರದಿ.**

ದಿನಾಂಕ:04.08.2010ರಂದು ಜರುಗಿದ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿಗಳ ಬಗ್ಗೆ ಕೈಗೊಂಡ ಅನುಪಾಲನಾ ವರದಿಯನ್ನು ಓದಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ 2 : ಸಂಸ್ಥೆಯ ಹಾಗೂ ಹೊಂದಿಕೊಂಡಿರುವ ಬೋಧಕ ಆಸ್ಪತ್ರೆಯ ಸಿಬ್ಬಂದಿ ವರ್ಗದವರಿಗೆ ವೇತನ, ಕಛೇರಿ ವೆಚ್ಚ, ಕಟ್ಟಡ ಕಾಮಗಾರಿ ಮತ್ತು ಉಪಕರಣ ಖರೀದಿಸಿರುವ ವೆಚ್ಚಗಳಿಗೆ ಸ್ಥಿರೀಕರಣ ನೀಡುವ ಬಗ್ಗೆ.**

1. ಸಂಸ್ಥೆಯ ಬೋಧಕ/ ಬೋಧಕೇತರ ಸಿಬ್ಬಂದಿಯವರಿಗೆ ದಿನಾಂಕ:01.04.2010 ರಿಂದ 31.08.2011 ರವರೆಗೆ ವೇತನ ಪಾವತಿ ಹಾಗೂ ಕಛೇರಿ ವೆಚ್ಚ, ಉಪಕರಣಗಳ ಖರೀದಿಗೆ ಮತ್ತು ಕಟ್ಟಡ ಕಾಮಗಾರಿಗಳಿಗೆ ಭರಿಸಿರುವ ವೆಚ್ಚ ಒಟ್ಟು ರೂ. 20,54,30,176.00ಗಳಿಗೆ ಸ್ಥಿರೀಕರಣ ನೀಡಲು ಕೋರಿದೆ.

| ಕ್ರ. ಸಂ | ವಿವರಣೆ | ದಿನಾಂಕ:01.04.2010 ರಿಂದ 31.08.2011 |
|---|---|---|
| 01 | ವೇತನ ಮತ್ತು ಕಛೇರಿ ವೆಚ್ಚ | 15,96,63,143 |
| 02 | ಉಪಕರಣ | 2,01,15,333 |
| 03 | ಕಟ್ಟಡ ಕಾಮಗಾರಿ | 1,98,63,045 |
| | ಒಟ್ಟು | **20,54,30,176** |

2. ದಿನಾಂಕ:01.04.2010 ರಿಂದ 31.08.2011 ರವರೆಗೆ ಸಂಸ್ಥೆಗೆ ಹೊಂದಿಕೊಂಡಿರುವ ಬೋಧನಾ ಆಸ್ಪತ್ರೆಯ ಸಿಬ್ಬಂದಿ ವರ್ಗದವರ ವೇತನ, ಕಛೇರಿ ವೆಚ್ಚ ಹಾಗೂ ಔಷಧಿ ಖರೀದಿಗಾಗಿ ಖರ್ಚು ಮಾಡಿರುವ ಬಾಬ್ತು ಒಟ್ಟು ರೂ.8,99,69,284/-ಗಳಿಗೆ ಸ್ಥಿರೀಕರಣ ನೀಡಲು ಕೋರಿದೆ. ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.

**ತೀರ್ಮಾನ :-** 2010-11 ಮತ್ತು ದಿನಾಂಕ:01.04.2011 ರಿಂದ 31.08.2011ರ ಅವಧಿಯವರೆಗೆ ವೆಚ್ಚ ಭರಿಸಿರುವ ಬಾಬ್ತು ಚರ್ಚಿಸಿ ಕ್ರಮವಾಗಿ ರೂ.20,54,30,176/- ಮತ್ತು ರೂ.8,99,69,284/-ಗಳಿಗೆ ಸ್ಥಿರೀಕರಣ ನೀಡಲಾಯಿತು.

**ವಿಷಯ ಸಂಖ್ಯೆ 3 : ಸರ್ಕಾರಕ್ಕೆ ಸಲ್ಲಿಸಿರುವ 2011-12ನೇ ಸಾಲಿನ ಆಯವ್ಯಯ ಅನುಮೋದನೆಗಾಗಿ**

2011-12ನೇ ಸಾಲಿಗೆ ಬೇಕಾಗಿರುವ ಅನುದಾನದ ಬಗ್ಗೆ ಆಯವ್ಯಯವನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದ ವಿವರಣೆ ಈ ಕೆಳಕಂಡತಿದೆ.

| | | |
|---|---|---|
| 1. ವೇತನ & ಕಛೇರಿ ವೆಚ್ಚ ಲೆಕ್ಕ ಶೀರ್ಷಿಕೆ 2210 (ಯೋಜನೆ) | - | 2,419.00 ಲಕ್ಷಗಳು |
| 2. ಉಪಕರಣ & ಕಟ್ಟಡ ಕಾಮಗಾರಿ ಲೆಕ್ಕ ಶೀರ್ಷಿಕೆ 4210 (ಯೋಜನೆ) | - | 7,890.00 ಲಕ್ಷಗಳು |
| 3. ವೇತನ, ಕಛೇರಿ ವೆಚ್ಚ & ಔಷಧ ಖರೀದಿ (ಯೋಜನೇತರ) | - | 1,020.50 ಲಕ್ಷಗಳು |
| ಒಟ್ಟು ರೂ. | - | **11,329.50 ಲಕ್ಷಗಳು** |

2011-12ನೇ ಸಾಲಿನ ಆಯವ್ಯಯ ರೂ.11,329.50 ಲಕ್ಷಗಳಿಗೆ ಅನುಮೋದನೆ ಕೋರಿದೆ.

**ತೀರ್ಮಾನ:**-2011-12ನೇ ಸಾಲಿಗೆ ಬೇಕಾಗಿರುವ ಅನುದಾನದ ಬಗ್ಗೆ ಚರ್ಚಿಸಿ ಘಟನೋತ್ತರ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ 4: 2010-11ನೇ ಸಾಲಿನ ಮತ್ತು 2011-12ನೇ ಸಾಲಿನಲ್ಲಿ ವೇತನ ಪಾವತಿಸಲು ಹೆಚ್ಚುವರಿಯಾಗಿ ಖರ್ಚು ಮಾಡಿರುವ ಹಣಕ್ಕೆ ಅನುಮೋದನೆ ಕೋರಿ.**

2010-11ನೇ ಸಾಲಿನಲ್ಲಿ ಸಂಸ್ಥೆಯ ಬೋಧಕ/ಬೋಧಕೇತರ ವರ್ಗದವರ ವೇತನ ಪಾವತಿಸಲು ಮತ್ತು ಕಛೇರಿ ವೆಚ್ಚಕ್ಕಾಗಿ ಪ್ರತಿ ತ್ರೈಮಾಸಿಕ ಅವಧಿಗೆ ರೂ.330.00 ಲಕ್ಷಗಳ ಆಯವ್ಯಯ ಸಲ್ಲಿಸಲಾಗಿತ್ತು. ಆದರೆ ಪ್ರತಿ ತ್ರೈಮಾಸಿಕಕ್ಕೆ ರೂ.250.00 ಲಕ್ಷಗಳು ಮಾತ್ರ ಬಿಡುಗಡೆಯಾಗಿರುತ್ತದೆ. ಆದುದರಿಂದ, 2010-11ನೇ ಸಾಲಿನ ಅಂತ್ಯಕ್ಕೆ ರೂ.149.00 ಲಕ್ಷಗಳು ಹೆಚ್ಚುವರಿಯಾಗಿ ವೆಚ್ಚವಾಗಿರುತ್ತದೆ.

2011-12ನೇ ಸಾಲಿನ ಬೋಧಕ/ಬೋಧಕೇತರ ವರ್ಗದವರ ವೇತನ ಪಾವತಿಸಲು ಪ್ರತಿ ತ್ರೈಮಾಸಿಕ ಅವಧಿಗೆ ರೂ.402.00 ಲಕ್ಷಗಳ ಅನುದಾನ ಅವಶ್ಯಕವಾಗಿದ್ದು, ಆದರೆ ಪ್ರತಿ ತ್ರೈಮಾಸಿಕ ಅವಧಿಗೆ ರೂ.162.08 ಲಕ್ಷಗಳು ಮಾತ್ರ ಬಿಡುಗಡೆಯಾಗಿರುತ್ತದೆ. ಇದರಿಂದ ಪ್ರತಿ ತ್ರೈಮಾಸಿಕ ಅವಧಿಗೆ ರೂ.240.00 ಲಕ್ಷಗಳು ಅನುದಾನ ಕೊರತೆ ಉಂಟಾಗಿರುತ್ತದೆ. ಆದುದರಿಂದ 2010-11ನೇ & 2011-12ನೇ ಸಾಲಿನ ಆಗಸ್ಟ್-2011ರ ಅಂತ್ಯದವರೆಗೆ ಹೆಚ್ಚುವರಿಯಾಗಿ ವೇತನ ಪಾವತಿಸಲು ರೂ.392.84 ಲಕ್ಷಗಳು ವೆಚ್ಚವಾಗಿರತ್ತದೆ. ರೂ.392.84 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 4210 ಕಟ್ಟಡ ಕಾಮಗಾರಿಗಾಗಿ ಬಿಡುಗಡೆಯಾಗಿರುವ ಅನುದಾನದಿಂದ ಭರಿಸಲಾಗಿರುತ್ತದೆ. ಖರ್ಚು ಮಾಡಿರುವ ರೂ.392.84 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2210ರ ಅಡಿಯಲ್ಲಿ ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಲೆಕ್ಕ ಶೀರ್ಷಿಕೆ 4210 ರಡಿಯಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ 2210 ರಡಿಯಲ್ಲಿ ವೆಚ್ಚ ಮಾಡಿರುವ ಬಗ್ಗೆ ಆರ್ಥಿಕ ಸಮಿತಿಯ ಅನುಮೋದನೆ ಕೋರಿದೆ.

**ತೀರ್ಮಾನ :-** ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ 2210 ಲೆಕ್ಕಶೀರ್ಷಿಕೆಯ ಮುಂದೆ ಬಿಡುಗಡೆ ಮಾಡಲಾಗುವ ಹೆಚ್ಚುವರಿ ಅನುದಾನದಲ್ಲಿ ಸರಿದೂಗಿಸಲು ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ 5 : 2011-12ನೇ ಸಾಲಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಎಂ.ಸಿ.ಐ, ಗೆ ಮಾನ್ಯತೆ ಶುಲ್ಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಶುಲ್ಕ ಪಾವತಿಗೆ ಅನುಮೋದನೆ ಕೋರುವ ಬಗ್ಗೆ.

ಅ) ಎಂ.ಸಿ.ಐ ನವದೆಹಲಿ ಇವರ ಪತ್ರ ಸಂಖ್ಯೆ : ಎಂ.ಸಿ.ಐ 34(4)/2011-ಎಂ.ಇ.ಡಿ/2665, ದಿನಾಂಕ:11.04.2011 ರಂತೆ 1ನೇ ವರ್ಷದ ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳ ಅಂತಿಮ ವರ್ಷದ ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳಿಗೆ ಎಂ.ಸಿ.ಐ ನವದೆಹಲಿ ಇವರಿಂದ Recognition Award" Degree Certificate ಅನ್ನು ನೀಡುವ ಬಗ್ಗೆ Compliance report ಸಲ್ಲಿಸುವಾಗ ರೂ.3.00ಲಕ್ಷಗಳನ್ನು ಡಿ.ಡಿ ಸಂಖ್ಯೆ295391, ದಿ:23.04.2011ರ ಮೂಲಕ ಪಾವತಿಸಿದೆ. ಈ ಮೊತ್ತವನ್ನು Grant-in-aid ಲೆಕ್ಕದಿಂದ ಭರಿಸಲಾಗಿದ್ದು, ಸದರಿ ಪಾವತಿಗೆ ಆರ್ಥಿಕ ಸಮಿತಿಯ ಘಟನೋತ್ತರ ಅನುಮೋದನೆ ಕೋರಲಾಗಿದೆ.

ಆ) 2011-12ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಪ್ರಾರಂಭಿಸಲು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ, ನವದೆಹಲಿ ಇಲ್ಲಿಂದ ಅನುಮತಿ ಪಡೆಯಲು 7 ವಿಭಾಗದಿಂದ ಪ್ರತಿ ವಿಭಾಗಕ್ಕೆ ರೂ.2.00ಲಕ್ಷದಂತೆ ರೂ.14.00ಲಕ್ಷಗಳನ್ನು ಅರ್ಜಿ ಶುಲ್ಕ ಪಾವತಿಸಿದೆ. ಸದರಿ ಪಾವತಿಗೆ ಆರ್ಥಿಕ ಸಮಿತಿಯ ಘಟನೋತ್ತರ ಅನುಮೋದನೆ ಕೋರಿದೆ.

ತೀರ್ಮಾನ :- ಪಾವತಿಸಿರುವುದನ್ನು ಸಭೆಯಲ್ಲಿ ಚರ್ಚಿಸಿ ಅನುಮೋದಿಸಲಾಯಿತು.

ವಿಷಯ ಸಂಖ್ಯೆ 6 : ಸನ್ನದು ಲೆಕ್ಕಿಗರಿಂದ ಲೆಕ್ಕಪತ್ರಗಳನ್ನು ಪರಿಶೀಲಿಸಿರುವ ವರದಿಯನ್ನು ಅನುಮೋದನೆಗೆ ಸಲ್ಲಿಸುವ ಬಗ್ಗೆ.

2005-06ನೇ ಸಾಲಿನಿಂದ 2009-10ನೇ ಸಾಲಿನವರೆಗೆ ಸಂಸ್ಥೆಯ ಲೆಕ್ಕಪತ್ರಗಳನ್ನು ಸನ್ನದು ಲೆಕ್ಕಿಗರಿಂದ ಪರಿಶೋಧಿಸಲಾಗಿದ್ದು, ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಆರ್ಥಿಕ ಸಮಿತಿಯ ಅನುಮೋದನೆಗೆ ಸಲ್ಲಿಸಿದೆ. ವರದಿಯ ಪ್ರತಿಯನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ.

2005-06 ರಿಂದ 2009-10ನೇ ಸಾಲಿನರವರೆಗೆ ಸಂಸ್ಥೆ ಲೆಕ್ಕಪತ್ರಗಳನ್ನು ಸನ್ನದು ಲೆಕ್ಕಿಗರಾದ ಮೆ॥ ಉಮೇಶ್ ರಾವ್.ಕೆ.ಎಸ್, ಮೈಸೂರು ರವರಿಂದ ವೆಚ್ಚ ರೂ.1000/-ಕ್ಕೆ ರೂ.15.00 ಪೈಸೆಯಂತೆ ಗರಿಷ್ಠ ರೂ.30,000/-ಗಳಿಗೆ ಮಿತಿಗೊಳಿಸಿ ಲೆಕ್ಕ ಪರಿಶೋದನೆ ಮಾಡಲು ಕಾರ್ಯಾದೇಶ ನೀಡಲಾಗಿತ್ತು. ಆದರೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/5/ಎಪಿಎನ್(2)/2010 ದಿನಾಂಕ.14.01.2011 ಆದೇಶದಲ್ಲಿ ಸದರಿ ಧರವನ್ನು ಪರಿಷ್ಕರಿಸಿ ರೂ.30.00ಪೈಸೆಯಂತೆ ಗರಿಷ್ಠ ರೂ.75,000/-ಕ್ಕೆ ಮಿತಿಗೊಳಿಸಿ ಆದೇಶವಾಗಿರುತ್ತದೆ.

ಸನ್ನದು ಲೆಕ್ಕಿಗರಾದ ಮೆ॥ ಉಮೇಶ್ ರಾವ್.ಕೆ.ಎಸ್, ಮೈಸೂರುರವರು ಸದರಿ ಸರ್ಕಾರಿ ಆದೇಶವನ್ನು ಲಗತ್ತಿಸಿ ರೂ.15.00ಪೈಸೆ ಬದಲು ರೂ.30.00ಪೈಸೆಯಂತೆ ಪಾವತಿಸಲು ಒತ್ತಾಯಪಡಿಸಿರುತ್ತಾರೆ. ಇದರಂತೆ ರೂ.30.00ಪೈಸೆಯಂತೆ ರೂ.75,000/-ಗಳಿಗೆ ಮಿತಿಗೊಳಿಸಿ ಪಾವತಿಸಲಾಗಿರತ್ತದೆ. ಸದರಿ ಪಾವತಿಗೆ ಆರ್ಥಿಕ ಸಮಿತಿಯ ಘಟನೋತ್ತರ ಅನುಮೋದನೆ ಕೋರಲಾಗಿದೆ.

ತೀರ್ಮಾನ :- ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಲಾಯಿತು.

**ವಿಷಯ 7 : ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕಟ್ಟಡಗಳ ಕಾಮಗಾರಿ ಬಿಲ್ಲಿನ ಮೊತ್ತದಲ್ಲಿ ಆದಾಯ ತೆರಿಗೆ ಮೊಬಲಗನ್ನು ಕಡಿತಗೊಳಿಸಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಡ್ಯರವರು ಆದಾಯ ತೆರಿಗೆ ಲೆಕ್ಕಶೀರ್ಷಿಕೆಗೆ ನಿಗಧಿತ ಅವಧಿಯಲ್ಲಿ ಜಮಾ ಮಾಡದಿರುವ ಬಾಬ್ತು ಪೆನಾಲ್ಟಿ/ ಬಡ್ಡಿ ಪಾವತಿಸುವ ಬಗ್ಗೆ.**

ಸಂಸ್ಥೆಗೆ ಸಂಬಂಧಿಸಿದ ಕಟ್ಟಡ ಕಾಮಗಾರಿ ಬಿಲ್ಲಿನ ಮೊತ್ತದಲ್ಲಿ ಆದಾಯ ತೆರಿಗೆ ಮೊಬಲಗನ್ನು ಕಡಿತಗೊಳಿಸಿ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ, ಮಂಡ್ಯ ರವರಿಗೆ ಚೆಕ್ ಮುಖಾಂತರ ಆದಾಯ ತೆರಿಗೆ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಪಾವತಿಸಲಾಗುತ್ತಿತ್ತು. ಆದರೆ ಲೋಕೋಪಯೋಗಿ ಇಲಾಖೆಯವರು ಸಂಬಂಧಿಸಿದ ಆದಾಯ ತೆರಿಗೆ ಲೆಕ್ಕ ಶೀರ್ಷಿಕೆಗೆ ಜಮೆ ಮಾಡದೆ ಲೋಕೋಪಯೋಗಿ ಇಲಾಖೆಯ ಡಿಪಾಸಿಟ್ ಲೆಕ್ಕದಲ್ಲಿಯೇ ಉಳಿಸಿಕೊಂಡಿದ್ದು, ಆದಾಯ ತೆರಿಗೆ ಇಲಾಖೆಯವರು ಪರಿಶೀಲನೆಗೆ ಬಂದನಂತರ ಪಾವತಿಗೆ ಕ್ರಮ ಕೈಗೊಂಡಿರುತ್ತಾರೆ.

ಆದಾಯ ತೆರಿಗೆಯನ್ನು ನಿಗಧಿತ ಅವಧಿಯಲ್ಲಿ ಲೋಕೋಪಯೋಗಿ ಇಲಾಖೆಯವರು ಆದಾಯತೆರಿಗೆ ಇಲಾಖೆಗೆ ಜಮೆ ಮಾಡದೆ ಇರುವುದಕ್ಕೆ 2006-07 ರಿಂದ 2009-10 ಸಾಲಿನವರೆಗೆ ರೂ.28,65,691/-ಗಳನ್ನು ಪೆನಾಲ್ಟಿ & ಬಡ್ಡಿ ರೂಪದಲ್ಲಿ ವಿಧಿಸಿ ಪಾವತಿಸುವಂತೆ ಆದಾಯ ತೆರಿಗೆ ಅಧಿಕಾರಿಗಳು ಸೂಚಿಸಿದ್ದರ ಮೇರೆಗೆ ರೂ.28,65,691/-ಗಳನ್ನು ಆದಾಯ ತೆರಿಗೆ ಲೆಕ್ಕ ಶೀರ್ಷಿಕೆಗೆ ಸಂಸ್ಥೆಯ ಕಟ್ಟಡ ಅನುದಾನದಿಂದ ಜಮೆ ಮಾಡಲಾಗಿರುತ್ತದೆ. ಹಾಗೂ ಸದರಿ ಮೊತ್ತವನ್ನು ಲೋಕೋಪಯೋಗಿ ಇಲಾಖೆಗೆ ಮುಂದೆ ಅನುದಾನ ಬಿಡುಗಡೆ ಮಾಡುವಾಗ ಕಟಾಯಿಸಿ ಕ್ರಮಕೈಗೊಳ್ಳುವಂತೆ ಸರ್ಕಾರದ ಆದೇಶವಾಗಿರುತ್ತದೆ. ಈ ಬಗ್ಗೆ ಲೋಕೋಪಯೋಗಿ ಇಲಾಖೆ, ಮಂಡ್ಯರವರಿಗೆ. ಸರ್ಕಾರದ ಆದೇಶ ಸಂಖ್ಯೆ: ಆಕುಕ/69/ಎಂಪಿಎಸ್/2011 (2) ಬೆಂಗಳೂರು ದಿನಾಂಕ.26.06.2011 ರಲ್ಲಿ ಲೆಕ್ಕ ಶೀರ್ಷಿಕೆ 4210-03-105-01-02-386 (ಯೋಜನೆ)ರಡಿಯಲ್ಲಿ ರೂ.6,37,86,661/-ಗಳು ಬಿಡುಗಡೆಯಾಗಿದ್ದು, ಆದಾಯ ತೆರಿಗೆ ಇಲಾಖೆಗೆ ಪಾವತಿಸಿರುವ ರೂ.28,65,691/-ಗಳನ್ನು ಗುತ್ತಿಗೆದಾರರ ಬಿಲ್ಲಿನಲ್ಲಿ ಕಟಾಯಿಸಿ ಸಂಸ್ಥೆಯ ಲೆಕ್ಕಕ್ಕೆ ಹೊಂದಾಣಿಕೆ ಮಾಡುವಂತೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆಯರನ್ನು ಕೋರಲಾಗಿದೆ. ವಿವರಗಳನ್ನು ಅನುಬಂಧ-4 ರಲ್ಲಿ ಲಗತ್ತಿಸಿದೆ.

ತೀರ್ಮಾನ :- ಸಭೆಯಲ್ಲಿ ಚರ್ಚಿಸಲಾಯಿತು ಆದಾಯತೆರಿಗೆ ಪಾವತಿ ವಿಳಂಭಕ್ಕೆ ಕಾರಣರಾಗಿರುವ ಲೋಕೋಪಯೋಗಿ ಇಲಾಖೆಯವರನ್ನೆ ಜವಾಬ್ದಾರರನ್ನಾಗಿ ಮಾಡುವಂತೆ ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ 8 : ಮಹಾಲೇಖಪಾಲರು ಕರ್ನಾಟಕ ಬೆಂಗಳೂರು ರವರು ಸಂಸ್ಥೆಯ 2008-09, 2009-10ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಮಾಡಿರುವ ಆಕ್ಷೇಪಣೆಗಳಿಗೆ ಕ್ರಮ ಕೈಗೊಳ್ಳುವ ಬಗ್ಗೆ.

ಮಹಾಲೇಖಪಾಲರು ಕರ್ನಾಟಕ ಬೆಂಗಳೂರು ರವರು ಈ ಸಂಸ್ಥೆಯ 2008-09, 2009-10ನೇ ಸಾಲಿನ ಲೆಕ್ಕ ಪರಿಶೋದನೆ ಕೈಗೊಂಡಿದ್ದು ಲೆಕ್ಕ ಪರಿಶೋದನಾ ವರದಿಯಲ್ಲಿ ಗುರುತಿಸಿರುವ ಆಕ್ಷೇಪಣೆಗಳಿಗೆ ಅನುಸರಣಾ ವರದಿ ಸಲ್ಲಿಸುವ ಬಗ್ಗೆ.

1. 2005-06ನೇ ಸಾಲಿನಲ್ಲಿ ಸಂಸ್ಥೆಯು ಪ್ರಾರಂಭವಾದಾಗ ನೇಮಕಾತಿ ಮಾಡಿಕೊಂಡ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರುಗಳಿಗೆ ಅವರವರ ಹುದ್ದೆಗೆ ಅನುಗುಣವಾಗಿ ವೇತನ ಶ್ರೇಣಿಯಲ್ಲಿ ಪ್ರಾರಂಭಿಕ ವೇತನವನ್ನು ನಿಗಧಿಪಡಿಸುವಾಗ ಮುಂಗಡ ವೇತನ ಬಡ್ತಿಯನ್ನು ಪ್ರಾಧ್ಯಾಪಕರುಗಳಿಗೆ 05 ರಿಂದ 13 ರವರೆಗೆ, ಸಹಾ ಪ್ರಾಧ್ಯಾಪಕರುಗಳಿಗೆ 01 ರಿಂ 05, ಸಹಾಯಕ ಪ್ರಾಧ್ಯಾಪಕರುಗಳಿಗೆ 01 ರಿಂದ 03 ರವರೆಗೆ ಮುಂಗಡ ವೇತನ ಬಡ್ತಿಯನ್ನು ನೀಡಿ ವೇತನ ನಿಗಧಿಪಡಿಸಿ ಹೆಚ್ಚುವರಿ ವೇತನ ಪಾವತಿ ಮಾಡಲಾಗಿದ್ದುದನ್ನು ಮಹಾಲೇಖಪಾಲರು ಲೆಕ್ಕ ಪರಿಶೋದನೆ ವರದಿಯಲ್ಲಿ ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಂಡು ವೇತನವನ್ನು ಪುನರ್‌ನಿಗಧಿಪಡಿಸುವಂತೆ ಹಾಗೂ ಹೆಚ್ಚುವರಿ ಪಾವತಿಸಿರುವುದನ್ನು ವಸೂಲಿ ಮಾಡುವಂತೆ ಸೂಚಿರುತ್ತಾರೆ. ವಿವರಗಳನ್ನು ಅನುಬಂಧ- 5 ರಲ್ಲಿ ಲಗತ್ತಿಸಿದೆ.

ಸಂಸ್ಥೆಯ ಬೈಲಾ ಪ್ರಕಾರ ಪ್ರಾರಂಭಿಕ ವೇತನವನ್ನು ಬೋಧಕ ವೈದ್ಯರ ಹಿಂದಿನ ಅನುಭವದ ಆದಾರದ ಮೇಲೆ ಗರಿಷ್ಠ 05 ಮುಂಗಡ ವೇತನ ಬಡ್ತಿಯನ್ನು ನೀಡಿ ನೇಮಕಾತಿ ಮಾಡಿಕೊಳ್ಳಲು ಮತ್ತು ನೇಮಕಾತಿ ಪ್ರಾಧಿಕಾರದ ಅನುಮೋದನೆ ಮೇರೆಗೆ ಗರಿಷ್ಠ 07 ಮುಂಗಡ ವೇತನ ಬಡ್ತಿಯನ್ನು ನೀಡಲು ಅವಕಾಶವಿರುತ್ತದೆ. ಈ ಬಗ್ಗೆ ಆರ್ಥಿಕ ಸಮಿತಿಯ ಸ್ಪಷ್ಟೀಕರಣ ಮತ್ತು ಮುಂದೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಅನುಮೋದನೆ ಕೋರಲಾಗಿದೆ.

ತೀರ್ಮಾನ :- ವಿಷಯದ ಬಗ್ಗೆ ಚರ್ಚಿಸಲಾಯಿತು ಸಂಸ್ಥೆಯ ಬೈಲಾ ಪ್ರಕಾರ ಹಾಗೂ ಈ ಹಿಂದೆ ಆಡಳಿತ ಮಂಡಳಿ ನಿರ್ದರಿಸಿರುವ ಗರಿಷ್ಠ ಮುಂಗಡ ವೇತನ ಬಡ್ತಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿ ಪ್ರಕರಣದಲ್ಲಿ ಪಾವತಿ ಮಾಡಲಾಗಿರುವ ಹೆಚ್ಚುವರಿ ಮುಂಗಡ ವೇತನ ಬಡ್ತಿ ಮೊತ್ತವನ್ನು ಲೆಕ್ಕಾಚಾರ ಮಾಡಿ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

**ವಿಷಯ 9 : ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗೃಹ ವೈದ್ಯರು ಹಾಗೂ ಸ್ನಾತಕೋತ್ತರ ವೈದ್ಯರುಗಳಿಗೆ ಶಿಷ್ಯವೇತನ ಪಾವತಿಸುವ ಬಗ್ಗೆ.**

ಸಂಸ್ಥೆಯಲ್ಲಿ ಹಾಲಿ 86 ಗೃಹ ವೈದ್ಯರು ಹಾಗೂ 10 ಸ್ನಾತ್ತೋಕೋತ್ತರ ವೈದ್ಯರುಗಳು ಕಾರ್ಯನಿರ್ವಹಿಸುತ್ತಿದ್ದು, ಅವರುಗಳ ಮಾಸಿಕ ಶಿಷ್ಯವೇತನ ರೂ.83,8000/-ಗಳಾಗಿರುತ್ತದೆ. ವಾರ್ಷಿಕಕ್ಕೆ ರೂ.1,00,56,000/-ಗಳ ಅವಶ್ಯಕ ಅನುದಾನ ಬೇಕಾಗಿರುತ್ತದೆ. ಸಂಸ್ಥೆಯ ಯೋಜನೆ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅನುದಾನದ ಕೊರತೆ ಇದ್ದು, ಸದರಿ ವೆಚ್ಚವನ್ನು ಸಂಸ್ಥೆಯ ಬೋಧಕ ಆಸ್ಪತ್ರೆಗೆ ಬಿಡುಗಡೆಯಾಗಿರುವ ಅನುದಾನ ಲೆಕ್ಕ ಶೀರ್ಷಿಕೆ 2210 (ಯೋಜನೇತರ) ರಡಿಯಲ್ಲಿ ಭರಿಸುವ ಬಗ್ಗೆ ಆರ್ಥಿಕ ಸಮಿತಿಯ ಅನುಮೊದನೆ ಕೋರಿದೆ.

ತೀರ್ಮಾನ :- ಚರ್ಚಿಸಲಾಯಿತು ಬೋಧಕ ಆಸ್ಪತ್ರೆಗೆ ಬಿಡುಗಡೆಯಾಗುವ ಅನುದಾನ ಲೆಕ್ಕ ಶೀರ್ಷಿಕೆ 2210(ಯೋಜನೇತರ)ರಡಿಯಲ್ಲಿ ಭರಿಸುವಂತೆ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ 10 : ಸ್ನಾತಕೋತ್ತರ/ಉನ್ನತ ವ್ಯಾಸಂಗಕ್ಕೆ ಸಂಸ್ಥೆಯ ಬೋಧಕ ವೈದ್ಯರುಗಳನ್ನು ನಿಯೋಜನೆ ಮಾಡಿರುವುದನ್ನು ಅನುಮೋದಿಸುವ ಬಗ್ಗೆ.**

ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಈ ಕೆಳಕಂಡ ಬೋಧಕ ವೈದ್ಯರುಗಳು ಸ್ನಾತಕೋತ್ತರ/ಉನ್ನತ ವ್ಯಾಸಂಗಕ್ಕಾಗಿ ಸರ್ಕಾರದ ಕೋಟಾದಡಿ ನಿಯೋಜನೆಗೊಂಡಿದ್ದು, ಸದರಿಯವರನ್ನು ಈ ಸಂಸ್ಥೆಯಿಂದ ಬಿಡುಗಡೆಗೊಳಿಸಿ ಆಯಾಯ ವಿದ್ಯಾಲಯಗಳಲ್ಲಿ ನಿಯೋಜನೆಗೊಂಡು ಉನ್ನತ ವ್ಯಾಸಂಗವನ್ನು ಮುಂದುವರೆಸುತ್ತಿರುತ್ತಾರೆ.

| ಕ್ರ. ಸಂ. | ವೈದ್ಯರ ಹೆಸರು | ಉನ್ನತ ವ್ಯಾಸಂಗಕ್ಕೆ ನಿಯೋಜನೆಗೊಂಡ ಸಂಸ್ಥೆ |
|---|---|---|
| 01 | ಡಾ॥ಮಂಜುಳಾ ಮಂಚಾಲಿ, ಸಹಾಯಕ ಪ್ರಾಧ್ಯಾಪಕರು, ರೋಗಲಕ್ಷಣಶಾಸ್ತ್ರ ವಿಭಾಗ. | ಕಿದ್ವಾಯಿ ಸ್ಮಾರಕ ಗಂಥಿ, ಸಂಸ್ಥೆ, ಬೆಂಗಳೂರು. |
| 02 | ಡಾ॥ನರಸಿಂಹಮೂರ್ತಿ, ಪ್ರಾಧ್ಯಾಪಕರು, ಶಸ್ತ್ರಚಿಕಿತ್ಸಾ ವಿಭಾಗ. | ವಿಮ್ಸ್, ಬಳ್ಳಾರಿ. |
| 03 | ಡಾ॥ಸುದರ್ಶನ್.ಸಿ.ಆರ್, ಸೀನಿಯರ್ ರೇಸಿಡೆಂಟ್ ಶಸ್ತ್ರಚಿಕಿತ್ಸಾ ವಿಭಾಗ. | ಬಿ.ಎಂ.ಸಿ, ಬೆಂಗಳೂರು. |
| 04 | ಡಾ॥ಎಸ್.ಚೈತ್ರ, ಸೀನಿಯರ್ ರೇಸಿಡೆಂಟ್ ಪ್ರಸೂತಿ ವಿಭಾಗ. | ಎಂ.ಎಂ.ಸಿ, ಮೈಸೂರು |

ಉನ್ನತ ವ್ಯಾಸಂಗಕ್ಕೆ ನಿಯೋಜನೆಗೊಳಿಸಿರುವುದನ್ನು ಅನುಮೋದನೆಗೆ ಸಲ್ಲಿಸಿದೆ.

ತೀರ್ಮಾನ :- ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ 11 : ಸಂಸ್ಥೆಯಲ್ಲಿ 60 ವರ್ಷ ವಯೋಮಿತಿ ಮೀರಿದ ಬೋಧಕ ವೈದ್ಯರುಗಳ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿ ಮುಂದುವರೆಸುವ ಬಗ್ಗೆ.

ಈ ಸಂಸ್ಥೆಯಲ್ಲಿ ಈ ಕೆಳಕಂಡ ಬೋಧಕ ವೈದ್ಯರುಗಳು 60ವರ್ಷಗಳ ವಯೋಮಿತಿ ಮೀರಿದ್ದು ಸೇವೆಯಲ್ಲಿ ಮುಂದುವರೆಯುತ್ತಿರುತ್ತಾರೆ. ಸದರಿಯವರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿ ಆಯಾ ವಿಭಾಗಗಳಲ್ಲಿಯೇ ಮುಂದುವರೆಸುವ ಬಗ್ಗೆ ಆರ್ಥಿಕ ಸಮಿತಿಯ ಅನುಮೋದನೆ ಕೋರಲಾಗಿದೆ.

| ಕ್ರ. ಸಂ. | ವೈದ್ಯರ ಹೆಸರು | ಜನ್ಮ ದಿನಾಂಕ | ಕಾರ್ಯ ನಿರ್ವಹಿಸುತ್ತಿರುವ ವಿಭಾಗ |
|---|---|---|---|
| 01 | ಡಾ॥ಲಲಿತಾಶಿವಣ್ಣ | 30.09.1947 | ಓ.ಬಿ.ಜಿ, ವಿಭಾಗ |
| 02 | ಡಾ॥ಆನಂದ್ | 12.09.1947 | ಅರವಳಿಕೆ ಶಾಸ್ತ್ರ ವಿಭಾಗ |

ತೀರ್ಮಾನ :- ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಕಾತಿ ಮಾಡಿಕೊಳ್ಳಲು ಮತ್ತು ಅವಶ್ಯಕತೆ ಇದ್ದಲ್ಲಿ ಮುಂದುವರೆಸುವಂತೆ ತೀರ್ಮಾನಿಸಿ ಅನುಮೋದಿಸಲಾಯಿತು.

ವಿಷಯ ಸಂಖ್ಯೆ 12 : ಬೋಧಕ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಯ ನಿಧಿಯನ್ನು ಕೇಂದ್ರೀಕೃತಗೊಳಿಸುವ ಬಗ್ಗೆ.

ಈ ಸಂಸ್ಥೆಯ ಬೋಧಕ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಯ ನಿಧಿಯನ್ನು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು, ಪ್ರತ್ಯೇಕ ಖಾತೆಯಲ್ಲಿ ಅವರ ಮಟ್ಟದಲ್ಲಿಯೇ ನಿರ್ವಹಿಸುತ್ತಿದ್ದು ಈ ಸಂಸ್ಥೆಯ ಯಾವುದೇ ಚಟುವಟಿಕೆಗಳಿಗೆ ಅದನ್ನು ಒಳಪಡಿಸಿರುವುದಿಲ್ಲ. ರೋಗಿಗಳಿಂದ ವಸೂಲಿ ಮಾಡುತ್ತಿರುವ, ಇ- ಅನುಭೋಗ ಶುಲ್ಕವು ಸಾರ್ವಜನಿಕ ಆದಾಯ (Public Revenue) ನಿಧಿಯಾಗಿರುತ್ತದೆ, ಸಂಸ್ಥೆಯ ನಿರ್ದೇಶಕರು ಸಾರ್ವಜನಿಕ ಆದಾಯದ ಮೇಲ್ವಿಚಾರಕರು ಹಾಗೂ ಲೆಕ್ಕ ಪತ್ರಗಳ ನಿರ್ವಾಹಣ ಅಧಿಕಾರಿಗಳಾಗಿರುವುದರಿಂದ ಪ್ರಸ್ತುತ ಆಸ್ಪತ್ರೆಯಲ್ಲಿ ನಿರ್ವಹಿಸುತ್ತಿರುವ ಆರೋಗ್ಯ ರಕ್ಷಾ ಸಮಿತಿಯ ನಿಧಿಯನ್ನು ನಿರ್ದೇಶಕರ ಖಾತೆಯಲ್ಲಿ ನಿರ್ವಹಿಸುವಂತೆ ಹಾಗೂ ಸದರಿ ನಿಧಿಯನ್ನು ಆಸ್ಪತ್ರೆಯ ರೋಗಿಗಳ ಆರೈಕೆ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಉದ್ದೇಶಕ್ಕೆ ಉಪಯೋಗಿಸಬಹುದಾಗಿರುತ್ತದೆ. ಈ ಬಗ್ಗೆ ಆರ್ಥಿಕ ಸಮಿತಿಯ ಅನುಮೋದನೆ ಕೋರಲಾಗಿದೆ.

ತೀರ್ಮಾನ :- ವಿಷಯದ ಬಗ್ಗೆ ಚರ್ಚಿಸಲಾಯಿತು ಇತರೆ ಹೊಸ ವೈದ್ಯಕೀಯ ಸಂಸ್ಥೆಗಳಲ್ಲಿ ಅನುಸರಿಸುತ್ತಿರುವ ಬಗ್ಗೆ ಪರಿಶೀಲಿಸಿ, ಮುಂದಿನ ಸಭೆಯಲ್ಲಿ ನಿರ್ಣಯ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 13 : ಸಿವಿಲ್ ಕಾಮಗಾರಿಗಳಿಗೆ ಅನುಮೋದನೆ ನೀಡುವ ಬಗ್ಗೆ**

ಈ ಸಂಸ್ಥೆ ಹಾಗೂ ಇದಕ್ಕೆ ಹೊಂದಿಕೊಂಡಿರುವ ಬೋಧಕ ಆಸ್ಪತ್ರೆಗಳಿಗೆ ಸಂಬಂಧಿಸಿದಂತೆ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳನ್ನು ದುರಸ್ತಿ ಹಾಗೂ ನವೀಕರಣ ಕಾಮಗಾರಿಗಳು ತುರ್ತಾಗಿ ಕೈಗೊಳ್ಳಬೇಕಾಗಿದ್ದು, ಸಂಸ್ಥೆಯ ವರ್ಕ್ಸ್‌ಕಮಿಟಿ ಸಭೆಯಲ್ಲಿ ಅನುಮೋದನೆಗೊಂಡಿದ್ದು, ಹಾಗೂ ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿಯ ಮೇರೆಗೆ ಕೈಗೊಳ್ಳಲು ಆರ್ಥಿಕ ಸಮಿತಿಯ ಅನುಮೊದನೆ ಕೋರಲಾಗಿದೆ.

ಕೈಗೊಳ್ಳಬೇಕಾದ ಕಾಮಗಾರಿಗಳ ವಿವರಗಳನ್ನು ಅನುಬಂಧ- 6 ರಲ್ಲಿ ನಮೂದಿಸಿದೆ.

ತೀರ್ಮಾನ :- ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಬೋಧಕ ಆಸ್ಪತ್ರೆಯ ದುರಸ್ತಿ ಹಾಗೂ ನವೀಕರಣ ಕಟ್ಟಡ ಕಾಮಗಾರಿಗಳಿಗೆ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ 14 : ಸಂಸ್ಥೆಯಲ್ಲಿನ ಮತ್ತು ಆಸ್ಪತ್ರೆಗಳಲ್ಲಿನ ತಾಂತ್ರಿಕ ಹುದ್ದೆಗಳನ್ನು ನಿಯಮಾನುಸಾರ ನೇಮಕಾತಿ ಮೂಲಕ ತುಂಬುವ ಬಗ್ಗೆ.**

ಸಂಸ್ಥೆಯ ಮತ್ತು ಆಸ್ಪತ್ರೆಯಡಿ ತೀವ್ರ ನಿಗಾಘಟಕ ಟ್ರಾಮಾ ಕೇರ್ ಸೆಂಟರ್ ಹಾಗೂ ಓ.ಪಿ.ಡಿ ಬ್ಲಾಕ್‌ಗಳಲ್ಲಿ ಕರ್ತವ್ಯ ನಿರ್ವಹಿಸಲು ತಾಂತ್ರಿಕ ಅರೆ ವೈದ್ಯಕೀಯ ಸಿಬ್ಬಂದಿಯವರ ಕೊರತೆಯಿದ್ದು ಸದರಿ ಸಿಬ್ಬಂದಿರವರನ್ನು ನೇಮಕಾತಿ ಮಾಡಿಕೊಳ್ಳುವುದು ಅತ್ಯಗತ್ಯವಾಗಿರುತ್ತದೆ. ಆದುದರಿಂಧ ಆರ್ಥಿಕ ಇಲಾಖೆಯ ಅನುಮೋದನೆಯನ್ನು ಪಡೆದು ನೇರ ನೇಮಕಾತಿ ಮಾಡಿಕೊಳ್ಳಲು ಹಾಗೂ ಈ ಸಂಬಂಧ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಆರ್ಥಿಕ ಸಮಿತಿಯ ಅನುಮೋದನೆ ಕೋರಲಾಗಿದೆ.

ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ- 7 ರಲ್ಲಿ ನಮೂದಿಸಿದೆ.

ತೀರ್ಮಾನ :- ಆರ್ಥಿಕ ಇಲಾಖೆಯ ಅನುಮೋದನೆ ಪಡೆದು ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ ತೀರ್ಮಾನಿಸಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ 15 : ಸಂಸ್ಥೆಯ ಬೋಧಕ ಆಸ್ಪತ್ರೆಯ ಕ್ಷ-ಕಿರಣ ವಿಭಾಗಕ್ಕೆ ಉಪಕರಣಗಳನ್ನು ಖರೀದಿಸಲು ಅನುಮೋದನೆ ನೀಡುವ ಬಗ್ಗೆ.**

ಸಂಸ್ಥೆಯ ಬೋಧಕ ಆಸ್ಪತ್ರೆಯ ಕ್ಷ-ಕಿರಣ ವಿಭಾಗಕ್ಕೆ ಈ ಕೆಳಕಂಡ ಉಪಕರಣಗಳು ರೋಗಿಗಳ ಚಿಕಿತ್ಸೆಗೆ ಅವಶ್ಯಕವಾಗಿ ಬೇಕಾಗಿದ್ದು ಹಾಗು ಎಂ.ಸಿ.ಐ ತಂಡದವರು ಸಂಸ್ಥೆಗೆ ಬೇಟಿ ನೀಡಿದ ಸಂದರ್ಭದಲ್ಲಿ ಸದರಿ ಉಪಕರಣಗಳು ಲಭ್ಯವಿರುವುದಿಲ್ಲವೆಂದು ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ವೈದ್ಯಕೀಯ ಶಿಕ್ಷಣ ರವರು ಉಪಕರಣಗಳನ್ನು ಕೂಡಲೇ ಖರೀದಿಸುವುದಾಗಿ ಎಂ.ಸಿ.ಐ, ಗೆ ಮುಚ್ಚಳಿಕೆ ಸಲ್ಲಿಸಿರುತ್ತಾರೆ. ಸದರಿ ಉಪಕರಣಗಳ ಅಂದಾಜು ಮೌಲ್ಯ ರೂ.3.00ಕೋಟಿಗಳಾಗುತ್ತದೆ.

1) 16 – SLICE C.T Scan Machine - 01
2) Higher End colour Doppler Ultra sound Machine - 01
3) C.R Machine - 01
4) 500 M.A X-ray Machine with two tubes - 01

ಕೆ.ಟಿ.ಟಿ.ಪಿ ನಿಯಮಗಳ ಪ್ರಕಾರ ಖರೀದಿಸಲು ಆರ್ಥಿಕ ಸಮಿತಿಯ ಅನುಮೋದನೆ ಕೋರಲಾಗಿದೆ.

**ತೀರ್ಮಾನ :-** ಉಪಕರಣಗಳ ಖರೀದಿ ಬಗ್ಗೆ ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ 16 : ಸಂಸ್ಥೆಗೆ ಮತ್ತು ಬೋಧಕ ಆಸ್ಪತ್ರೆಗೆ ಭದ್ರತಾ ಸಿಬ್ಬಂದಿ ನೇಮಕಾತಿ ಮಾಡುವ ಬಗ್ಗೆ.**

ಕಾಲೇಜು, ವಿದ್ಯಾರ್ಥಿನಿಲಯ ಮತ್ತು ಬೋಧಕ ಆಸ್ಪತ್ರೆಯ ಭದ್ರತೆಯನ್ನು ಇದುವರೆವಿಗೂ ಸಮಾದೇಷ್ಟರು ಗೃಹರಕ್ಷಕದಳ, ಮಂಡ್ಯ ಜಿಲ್ಲೆ, ಮಂಡ್ಯ ರವರು ನಿರ್ವಹಿಸುತ್ತಿದ್ದು, ಒಬ್ಬ ಗೃಹರಕ್ಷಕರಿಗೆ ದಿನ ಒಂದಕ್ಕೆ ರೂ.175/-ಪಾವತಿಸಲಾಗುತ್ತಿದೆ. ಆದರೆ ಆರಕ್ಷಕ ಮಹಾ ನಿರ್ದೇಶಕರು ಹಾಗೂ ಗೃಹರಕ್ಷಕದಳದ ಮಹಾಸಮಾದೇಷ್ಟರು ಕರ್ನಾಟಕ ರಾಜ್ಯ ಬೆಂಗಳೂರು, ರವರ ನಿಸ್ತಂತು ಸಂದೇಶ ಸಂಖ್ಯೆ ಆಡಳಿತ(2)1/ಸಿ.ಜಿ.ಓ/2011-12, ದಿನಾಂಕ:11.07.2011ರಲ್ಲಿ ಸೂಚಿಸಿರುವಂತೆ, ದಿನಾಂಕ:01.07.2011ರಿಂದ ಒಬ್ಬ ಗೃಹರಕ್ಷಕರಿಗೆ ದಿನ ಒಂದಕ್ಕೆ ರೂ.263/-ರಂತೆ ಪಾವತಿಸಲು ಸೂಚಿಸಿರುತ್ತಾರೆ, ಇದರಿಂದಾಗಿ ಒಬ್ಬ ಗೃಹರಕ್ಷಕರಿಗೆ ದಿನ ಒಂದಕ್ಕೆ ರೂ.88/-ರಂತೆ ಹೆಚ್ಚುವರಿ ಪಾವತಿಸಬೇಕಾಗಿರುತ್ತದೆ. ಪ್ರಸಕ್ತ ಸಂಸ್ಥೆಯಲ್ಲಿ 50 ಜನ ಗೃಹರಕ್ಷಕರನ್ನು ನೇಮಕಾತಿ ಮಾಡಿಕೊಂಡಿದ್ದು ರೂ.88/- 50 ಜನರಿಗೆ ರೂ.4,400/-ಗಳನ್ನು ಪ್ರತಿ ದಿನಕ್ಕೆ ಹೆಚ್ಚುವರಿಯಾಗಿ ಪಾವತಿಸಬೇಕಾಗಿದ್ದು, ತಿಂಗಳಿಗೆ ರೂ.1,32,000/-ಗಳ ಹೆಚ್ಚುವರಿ ಪವಾತಿಸಬೇಕಾಗಿರುತ್ತದೆ, ಹಾಗೂ ಒಬ್ಬ ಗೃಹರಕ್ಷಕರಿಗೆ ಪ್ರತಿ ತಿಂಗಳಿಗೆ ರೂ.7,890/-ಗಳ ವೇತನ ಪಾವತಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹೆಚ್ಚುವರಿ ದರವು ಸಂಸ್ಥೆಗೆ ಆರ್ಥಿಕ ಹೊರೆಯಾಗುತ್ತದೆ. ಆದುದರಿಂದ ಭದ್ರತಾ ಸಿಬ್ಬಂದಿಯನ್ನು ಹೊರಗುತ್ತಿಗೆ ಮೂಲಕ ನೇಮಿಸಿಕೊಳ್ಳಲು ಆರ್ಥಿಕ ಸಮಿತಿಯ ಅನುಮೋದನೆ ಕೋರಲಾಗಿದೆ. ವಿವರಗಳನ್ನು ಅನುಬಂಧ – 8 ರಲ್ಲಿ ಲಗತ್ತಿಸಿದೆ.

ತೀರ್ಮಾನ :- ಚರ್ಚಿಸಲ್ಪಾಯಿತು ಸಂಸ್ಥೆಯ ಹಂತದಲ್ಲಿಯೇ ಸೂಕ್ತ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಿ ಅನುಮೋದಿಸಲಾಯಿತು.

ವಿಷಯ ಸಂಖ್ಯೆ 17 : ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

1. ನಿರ್ದೇಶಕರು ರವರ ಕೊಠಡಿ ದುರಸ್ಥಿ ಮತ್ತು ನವೀಕರಣ ಮಾಡಲು ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಪಡೆದು ಕಾಮಗಾರಿ ಕೈಗೊಳ್ಳುವ ಬಗ್ಗೆ.

ತೀರ್ಮಾನ :- ಚರ್ಚಿಸಲಾಯಿತು_ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಪಡೆದು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಿ ಅನುಮೋದಿಸಲಾಯಿತು.

2. ಕಛೇರಿಯನ್ನು ದುರಸ್ಥಿ ಮತ್ತು ನವೀಕರಣ ಮಾಡುವ ಬಗ್ಗೆ.

ತೀರ್ಮಾನ :- ಚರ್ಚಿಸಲಾಯಿತು_ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಪಡೆದು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಿ ಅನುಮೋದಿಸಲಾಯಿತು.

3. ಹಿಂದಿನ ಜಿಲ್ಲಾ ಆಸ್ಪತ್ರೆ ಕಟ್ಟಡಕ್ಕೆ ಸುಣ್ಣ ಮತ್ತು ಬಣ್ಣ ಹಾಗೂ ದುರಸ್ಥಿ ಮಾಡುವ ಬಗ್ಗೆ. (ಸ್ನಾತಕೋತ್ತರ ಸೀಟುಗಳ ಹಂಚಿಕೆ ಬಗ್ಗೆ ಎಂ.ಸಿ.ಐ ರವರು ಪರಿವೀಕ್ಷಣೆಗೆ ಬರುವುದರಿಂದ).

ತೀರ್ಮಾನ :- ಚರ್ಚಿಸಲಾಯಿತು_ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಪಡೆದು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಿ ಅನುಮೋದಿಸಲಾಯಿತು.

4. <u>ಸಂಸ್ಥೆಗೆ ಆರ್ಥಿಕ ಅಧಿಕಾರಿಯವರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ.</u>

<u>ತೀರ್ಮಾನ</u> :- ಆರ್ಥಿಕ ಅಧಿಕಾರಿಗಳಾಗಿ, ಈ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಆಂಜನಪ್ಪ, ರವರು ದಿನಾಂಕ:30.06.2011ರಂದು ವಯೋಮಿತಿಗೊಂಡು ನಿವೃತ್ತರಾಗಿರುತ್ತಾರೆ, ಸದರಿ ಹುದ್ದೆಯು ಹಾಲಿ ಖಾಲಿ ಇದ್ದು ಶ್ರೀ ಆಂಜನಪ್ಪ, ರವರನ್ನು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ಮನವಿ ಸಲ್ಲಿಸಿರುತ್ತಾರೆ. ಸಂಸ್ಥೆಯ 2010-11ನೇ ಸಾಲಿನ ಲೆಕ್ಕ ತಪಾಸಣೆಯನ್ನು ಮಹಾಲೇಖಪಾಲರಿಂದ ಕೈಗೊಳ್ಳಬೇಕಾಗಿದ್ದು. ಸದರಿ ಅವಧಿಯಲ್ಲಿ ಶ್ರೀ ಆಂಜನಪ್ಪ, ರವರೆ ಆರ್ಥಿಕ ಅಧಿಕಾರಿಗಳಾಗಿದ್ದುದರಿಂದ ಲೆಕ್ಕ ಪರಿಶೋದನೆ ಆಗುವವರೆಗೆ ತಾತ್ಕಾಲಿಕವಾಗಿ 6 ತಿಂಗಳುಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ ಚರ್ಚಿಸಿ ತೀರ್ಮಾನಿಸಿ ಅನುಮೋದಿಸಲಾಯಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಆರ್ಥಿಕ ಸಲಹೆಗಾರರು ಹಾಗೂ,
ಸದಸ್ಯ ಕಾರ್ಯದರ್ಶಿಗಳು,
ಆರ್ಥಿಕ ಸಮಿತಿ,
ಮಿಮ್ಸ್, ಮಂಡ್ಯ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ), ಹಾಗೂ,
ಅಧ್ಯಕ್ಷರು ಆರ್ಥಿಕ ಸಮಿತಿ,
ಮಿಮ್ಸ್, ಮಂಡ್ಯ.